**ದಿ: 12-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಎನ್.ಎನ್. ವಕೀಲರಿಂದ :**

ಈ ದಾವೆಯಲ್ಲಿ ನಾನು ವಾದಿಯಾಗಿದ್ದು ಇಂದು ನನ್ನ ಮೌಖಿಕ ಸಾಕ್ಷದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿ ಮತ್ತು ನಿಜ ಇರುತ್ತವೆ. ಅವುಗಳನ್ನು ತಿಳಿದುಕೊಂಡು ನಾನು ಸಹಿ ಹಾಕಿರುತ್ತೇನೆ.

ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

1. ಗಬ್ಬೂರು ಗ್ರಾಮದ ಜಮೀನಿನ ಸರ್ವೆ ನಂಬರ್ 488 ಹಿಸ್ಸಾ-2ಎ, ಇದರ 03 ಕಂಪ್ಯೂಟರ್ ಪಹಣಿಯನ್ನು ನಿ ಪಿ 1 ರಿಂದ 3 ಎಂದು ಗುರುತಿಸಲಾಯಿತು.

2. ತಹಶೀಲ್ದಾರ ದೇವದುರ್ಗ ರವರಿಗೆ ಸಲ್ಲಿಸಿದ ಅರ್ಜಿ , ಪ್ರಮಾಣ ಪತ್ರ, ಮುಟೇಶನ್ ಮತ್ತು ನೋಟಿಸ್ ದೃಢೀಕೃತ ನಕಲುಪ್ರತಿಗಳನ್ನು ಕ್ರಮವಾಗಿ ನಿ ಪಿ 4 ರಿಂದ 7 ಎಂದು ಗುರುತಿಸಲಾಯಿತು.

3. ದಿನಾಂಕ: 08-11-2002 ರಂದು ಶ್ರೀ ಹನುಮಂತ ತಂದೆ ಹನುಮಣ್ಣ ಇವರು ವಾದಿ ಪರವಾಗಿ ದಾವಾ ಜಮೀನು ಬಿಟ್ಟುಕೊಟ್ಟಿರುವುದಾಗಿ ಬರೆದುಕೊಟ್ಟ ಒಪ್ಪಿಗೆ ಪತ್ರವನ್ನು ಹಾಜರುಪಡಿಸಿದ್ದು ಸದರಿ ಒಪ್ಪಿಗೆ ಪತ್ರವು ರೂ 10 ರೂ ಸ್ಟಾಂಪ್ ಪೇಪರ್ ನ ಮೇಲೆ ಬರೆದಿದ್ದು ನಿಗದಿತ ಡ್ಯೂಟಿ ಮತ್ತು ಪೆನಾಲ್ಟಿ ಕಟ್ಟಬೇಕಾಗಿರುತ್ತದೆ ಹಾಗಾಗಿ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

ಮುಂದುವರಿದ ಮುಖ್ಯ ವಿಚಾರಣೆಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು..

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ

**ದಿ: 12-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಎನ್.ಎನ್. ವಕೀಲರಿಂದ :**

ಈ ದಾವೆಯಲ್ಲಿ ನಾನು ವಾದಿಯಪರ ಸಾಕ್ಷಿದಾರನಾಗಿದ್ದು ಇಂದು ನನ್ನ ಮೌಖಿಕ ಸಾಕ್ಷದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿ ಮತ್ತು ನಿಜ ಇರುತ್ತವೆ. ಅವುಗಳನ್ನು ತಿಳಿದುಕೊಂಡು ನಾನು ಸಹಿ ಹಾಕಿರುತ್ತೇನೆ.

**ಪಾಟೀಸವಾಲು**: ಪ್ರತಿವಾದಿ ತಕರಾರು ಸಲ್ಲಿಸದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ